**ದಿನಾಂಕ: 07-08-2021 ರಂದು ಬೆಳಿಗ್ಗೆ 11-00 ಗಂಟೆಗೆ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ ಸಾರ್ವಜನಿಕ ಸೇವಾ ಸಂಕೀರ್ಣ ವಾರ್ಡ್ ನಂ.126 ಮಾರುತಿಮಂದಿರದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ಹಾಜರಿದ್ದ ಅಧಿಕಾರಿಗಳು:**

1) ಕಂದಾಯ ಅಧಿಕಾರಿ (ಗೋವಿಂದರಾಜನಗರ)
2) ಸಹಾಯಕ ಅಭಿಯಂತರರು, ವಾರ್ಡ್ ನಂ.126
3) ಕಂದಾಯ ಪರಿವೀಕ್ಷಕರು
4) ಬೆಸ್ಕಾಂ ಇಲಾಖೆಯ ಅಧಿಕಾರಿ
5) ತೋಟಗಾರಿಕೆ ಇಲಾಖೆಯ ಪರಿವೀಕ್ಷಕರು
6) ಪಶುಸಂಗೋಪನಾ ಇಲಾಖೆಯ ಪರಿವೀಕ್ಷಕರು
7) ಆರೋಗ್ಯ ಇಲಾಖೆಯ ಕೆಲಸ ನಿರೀಕ್ಷಕರು
8) ಪಿ.ಎಫ್.ಬಡಾವಣೆ, ಕೆನರಾ ಬ್ಯಾಂಕ್ ಕಾಲೋನಿ, ಎಲ್.ಐ.ಸಿ. ವೆಲ್‌ಫೇರ್ ಅಸೋಸಿಯೇಷನ್‌ನ ಅಧ್ಯಕ್ಷರು

ದಿನಾಂಕ: 07-08-2021 ರಂದು ಬೆಳಿಗ್ಗೆ 11-30 ಗಂಟೆಗೆ ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂದ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ ಅಧ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

**ಚರ್ಚಿಸಲಾದ ವಿಷಯಗಳ ವಿವರಗಳು:**

1. ಮತದಾರರ ಪಟ್ಟಿಯಲ್ಲಿ ವಾರ್ಡಿನಲ್ಲಿರುವ ಮತದಾರರು ಎರಡು, ಮೂರು ಭಾಗಗಳಲ್ಲಿ ನೊಂದಾಯಿಸಿರುವುದು ಕಂಡು ಬಂದಿದ್ದು, ಅದನ್ನು ಇದುವರೆವಿಗೂ ತೆಗೆದು ಹಾಕಿರುವುದಿಲ್ಲ ಹಾಗೂ ಮರಣ ಹೊಂದಿರುವವರನ್ನು ಸಹ ಮತದಾರರ ಪಟ್ಟಿಯಲ್ಲಿ ಹಾಗೆಯೇ ಉಳಿಸಿಕೊಂಡಿರುವುದು ಕಂಡು ಬಂದಿರುವುದರಿಂದ ಕೂಡಲೇ ಮತಗಟ್ಟೆ ಅಧಿಕಾರಿಗಳ ಮುಖಾಂತರ ತೆಗೆದು ಹಾಕುವಂತೆ ಶ್ರೀ ರಾಮು ರವರು ಸಭೆಯಲ್ಲಿ ತಿಳಿಸಿದ್ದರು.
2. ವಾರ್ಡ್ ನಂ.126, ಮಾರುತಿಮಂದಿರ ಕಸ ಸಂಗ್ರಹಣೆ/ವಿಂಗಡಣೆ ಸಂಬಂಧವಾಗಿ ಶ್ರೀ ರಾಮು ರವರು ಸಭೆಯಲ್ಲಿ ಮಾತನಾಡುತ್ತಾ, ಸದರಿ ವಾರ್ಡಿಗೆ ಸಂಬಂಧಿಸಿದಂತೆ ಕಸವನ್ನು ಸಂಗ್ರಹಿಸಿ, ಕೆ.ಹೆಚ್.ಬಿ. ಕ್ವಾಟ್ರಸ್ ಹತ್ತಿರ ಸಂಗ್ರಹಿಸಿರುವ ಕಸವನ್ನು ವಿಂಗಡಿಸಿ, ಲಾರಿಗಳಿಗೆ ಹಾಕುತ್ತಿದ್ದು ಕಂಡು ಬಂದಿದ್ದು, ಅಲ್ಲಿನ ನಿವಾಸಿಗಳಿಗೆ ಓಡಾಡಲು ತೊಂದರೆಯಾಗುತ್ತಿದ್ದು, ಇದಕ್ಕೆ ಸಂಬಂಧಪಟ್ಟ ಕಂಟ್ರಾಕ್ಟರ್‌ರವರನ್ನು ಸಭೆಗೆ ಕರೆದು, ವಾಹನಗಳ ನಿಲುಗಡೆಗೆ ಬೇರೆ ಕಡೆ ವ್ಯವಸ್ಥೆ ಮಾಡಬೇಕೆಂದು ಹಾಗೂ ಸಹಾಯಕ ಕಾರ್ಯ ನಿರ್ವಾಹಕರು (ಎಸ್.ಡಬ್ಲ್ಯೂ.ಎಂ.) ರವರಿಗೆ ಪತ್ರ ಮುಖೇನಾ ಕಸ ಸಂಗ್ರಹಿಸಲ್ಪಟ್ಟ ವಾಹನಗಳನ್ನು ಬೇರೆ ಕಡೆ ನಿಲ್ಲಿಸುವಂತೆ ಸೂಚಿಸಬೇಕೆಂದು ತಿಳಿಸಿದರು.
3. ಬಿ.ಬಿ.ಎಂ.ಪಿ. ವತಿಯಿಂದ ಎಲ್ಲಾ ವಾರ್ಡುಗಳಿಗೆ ಮಾರ್ಷಲ್‌ರವರನ್ನು ನೇಮಕ ಮಾಡಿದ್ದು, ನೇಮಕಗೊಂಡಿರುವ ಮಾರ್ಷಲ್‌ಗಳಿಗೆ ಯಾವ ಯಾವ ಕೆಲಸವನ್ನು ನಿರ್ವಹಿಸಬೇಕೆಂದು ಸುತ್ತೋಲೆ ನೀಡಿರುವ ಬಗ್ಗೆ, ಮುಂದಿನ ಸಭೆಯೊಳಗೆ ಮಾಹಿತಿಯನ್ನು ನೀಡಬೇಕೆಂದು ಶ್ರೀ ರಾಮುರವರು ತಿಳಿಸಿದರು.
4. ಗೋವಿಂದರಾಜನಗರದ ಎಲ್ಲಾ ವಾರ್ಡಿನ ಹೋಟೆಲ್‌ನಲ್ಲಿನ ಸಿಬ್ಬಂದಿಗಳಿಗೆ ಲಸಿಕೆ ನೀಡಿದ್ದಾರೆಯೇ ಇಲ್ಲವೇ ಎಂಬುದರ ಮಾಹಿತಿಯನ್ನು ಆರೋಗ್ಯ ವೈದ್ಯಾಧಿಕಾರಿ (ಗೋವಿಂದರಾಜನಗರ)ರವರಿಂದ ಮಾಹಿತಿಯನ್ನು ಪಡೆದು ಮುಂದಿನ ಸಭೆಯೊಳಗೆ ನೀಡಬೇಕೆಂದು ಸಭೆಗೆ ಹಾಜರಿದ್ದ ಸದಸ್ಯರುಗಳು ಕೋರಿರುತ್ತಾರೆ.

Scanned by CamScanner

5. ವಾರ್ಡ್ ನಂ.126 ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಲಸಿಕೆ ಹಾಗೂ ಕೋವಿಡ್-19ರ ಪರೀಕ್ಷೆಯನ್ನು ಒಂದೇ ಸ್ಥಳದಲ್ಲಿ ನಡೆಸುತ್ತಿರುವುದಾಗಿ ಕಂಡು ಬಂದಿದ್ದು, ಲಸಿಕೆ ಹಾಗೂ ಪರೀಕ್ಷೆಯನ್ನು ಬೇರೆ ಬೇರೆ ಸ್ಥಳದಲ್ಲಿ ನಡೆಸಬೇಕೆಂದು ತಿಳಿಸಿದ್ದರೂ ಸಹ ವಾರ್ಡ್ ನಂ.126ರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಒಂದೇ ಕಡೆ ನಡೆಯುತ್ತಿರುವುದು ಸರಿಯಲ್ಲವೆಂದು ಶ್ರೀ ರಾಮುರವರು ಸಭೆಯಲ್ಲಿ ದೂರಿರುತ್ತಾರೆ.
6. ವಿನಾಯಕ ಬಡಾವಣೆಯಲ್ಲಿನ ಲೈಬ್ರರಿ ಕೇಂದ್ರದಲ್ಲಿ ತಮಿಳು ದಿನಪತ್ರಿಕೆಯನ್ನು ಸಾರ್ವಜನಿಕರು ಪ್ರತಿದಿನ ಓದುತ್ತಿದ್ದು, ಇತ್ತೀಚೆಗೆ ತಮಿಳು ದಿನಪತ್ರಿಕೆಯು ಲೈಬ್ರರಿಗೆ ತಲುಪದಿದ್ದರೂ ಸಹ ಪ್ರತಿ ಮಾಹೆಯಲ್ಲಿ ಬಿಲ್ಲನ್ನು ಕ್ಲೇಮು ಮಾಡುತ್ತಿರುವುದಾಗಿ ವಿನಾಯಕ ಬಡಾವಣೆ ವೆಲ್‌ಫೇರ್ ಅಸೋಸಿಯೇಷನ್ ಅಧ್ಯಕ್ಷರು ದೂರನ್ನು ದೂರವಾಣಿ ಮುಖಾಂತರ ತಿಳಿಸಿರುತ್ತಾರೆ.
7. ಜಿ.ಕೆ.ಡಬ್ಲ್ಯೂ ಬಡಾವಣೆಯಲ್ಲಿ ಬೇರೆ ಕಡೆಯ ನಿವಾಸಿಗಳು ಕಾರ್ ಪಾರ್ಕಿಂಗ್ ಮಾಡುತ್ತಿದ್ದು, ರಾತ್ರಿಯ ವೇಳೆಯಲ್ಲಿ ಎಲ್ಲಾ ತರಹದ ಅವ್ಯವಹಾರಗಳು ನಡೆಯುತ್ತಿರುವುದರಿಂದ, ಸಂಬಂಧಪಟ್ಟ ಪೋಲೀಸ್ ಇಲಾಖೆರವರಿಗೆ ಪತ್ರವನ್ನು ಬರೆಯುವಂತೆ ಶ್ರೀ ಟಿ.ರಾಮು ರವರು ತಿಳಿಸಿರುತ್ತಾರೆ.
8. ಕೆನರಾ ಬ್ಯಾಂಕ್ ಕಾಲೋನಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ ರವರು ವಾರ್ಡಿನ ನೋಡಲ್ ಅಧಿಕಾರಿ ರವರು ಸಭೆಯ ದಿನದಂದು ಮನವಿ ಪತ್ರವನ್ನು ನೀಡಿದ್ದು, ಪತ್ರದಲ್ಲಿ ಯಾವ ಯಾವ ಸ್ಥಳದಲ್ಲಿ ಮರದ ಕೊಂಬೆಗಳನ್ನು ಕಡಿಯಬೇಕೆಂದು ತಿಳಿಸಿರುತ್ತಾರೆ. ಸದರಿಯವರ ಮನವಿಪತ್ರವನ್ನು ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ರವಾನಿಸಲಾಗಿರುತ್ತದೆ.
9. ವಾರ್ಡ್ ನಂ.126, ವಾರ್ಡ್ ಕಛೇರಿಯಲ್ಲಿ ಎರಡನೇ ಅಂತಸ್ತಿನಲ್ಲಿ ಹಿರಿಯ ನಾಗರೀಕರು ಪ್ರತಿದಿನ ಗ್ರಂಥಾಲಯಕ್ಕೆ ಭೇಟಿ ನೀಡುತ್ತಿದ್ದು, ಮೆಟ್ಟಿಲು ಏರಿ ಎರಡನೇ ಮಹಡಿಗೆ ಹೋಗಬೇಕಾಗಿರುತ್ತದೆ. ಆದರೆ ಅಲ್ಲಿನ ಲಿಫ್ಟ್ ಕೆಟ್ಟು ಹೋಗಿರುವುದಾಗಿ ವಾಚ್‌ಮೆನ್‌ರವರು ತಿಳಿಸಿರುತ್ತಾರೆ. ಆದುದರಿಂದ ಲಿಫ್ಟ್‌ನ್ನು ಸರಿಪಡಿಸಿಕೊಡಬೇಕೆಂದು ಹಿರಿಯ ನಾಗರೀಕರೊಬ್ಬರು ಸಭೆಯಲ್ಲಿ ಕೋರಿದಾಗ, ಸಂಬಂಧಪಟ್ಟ ಸಹಾಯಕ ಅಭಿಯಂತರರು ಲಿಫ್ಟ್ ಕೆಟ್ಟು ಹೋಗಿಲ್ಲದಿರುವುದಾಗಿ, ಆದರೆ, ವಿದ್ಯುತ್ ಬಿಲ್ ಪ್ರತಿ ತಿಂಗಳು ಕನಿಷ್ಠ 25 ಸಾವಿರ ರೂಪಾಯಿಗಳ ಬಿಲ್ ಬರುವುದರಿಂದ ಲಿಫ್ಟ್ ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ ಎಂದು ಉತ್ತರಿಸಿದರು.

ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿ ಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

N. Uma 7/8/2021

ವಾರ್ಡ್ ನೋಡಲ್ ಅಧಿಕಾರಿ

ವಾರ್ಡ್ ನಂ.126 ಮಾರುತಿಮಂದಿರ

ಪ್ರತಿಯನ್ನು:

1. ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತು (ಯೋಜನೆ)ರವರ ಅವಗಾಹನೆಗೆ ಸಲ್ಲಿಸಿದೆ.
3. ಜಂಟಿ ಆಯುಕ್ತರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ.

Scanned by CamScanner